ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

**ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡವಳಿಗಳು**

ವಿಷಯ : 2018-19ನೇ ಸಾಲಿಗೆ ಸರ್.ಸಿ.ವಿ. ರಾಮನ್ ಮತ್ತು ಸಂಚಿಹೊನ್ನಮ್ಮ ವಿದ್ಯಾರ್ಥಿವೇತನಕ್ಕಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ:ಇಡಿ/60/ಹೆಚ್‌ಪಿಸಿ/2018, ದಿ:09.04.2018 (ಹಂಚಿಕೆ ಆದೇಶ).
2. ಸರ್ಕಾರದ ಆದೇಶ ಸಂಖ್ಯೆ:ಇಡಿ/60/ಹೆಚ್‌ಪಿಸಿ/2018(ಎ), ದಿ:09.04.2018 ಮತ್ತು 27.07.2018 (ಅನುದಾನ ಬಿಡುಗಡೆ ಆದೇಶ).
3. ಈ ಕಛೇರಿ ಸುತ್ತೋಲೆ ಸಂಖ್ಯೆ: ಕಾಶಿಇ/11/ಸುತ್ತೋಲೆ/2018-19/ವಿವೇ ದಿ:05.06.2018.
4. ಆರು ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಂದ ವಿವಿಧ ದಿನಾಂಕಗಳಲ್ಲಿ ಅನುದಾನ ಕೋರಿ ಸಲ್ಲಿಸಿರುವ ಪ್ರಸ್ತಾವನೆಗಳು.

*****

**ಪ್ರಸ್ತಾವನೆ :**

2018-19ನೇ ಸಾಲಿನಲ್ಲಿ ಉಲ್ಲೇಖ (1) ಮತ್ತು (2)ರ ಸರ್ಕಾರದ ಆದೇಶಗಳನ್ವಯ ಸರ್.ಸಿ.ವಿ. ರಾಮನ್ ಮತ್ತು ಸಂಚಿಹೊನ್ನಮ್ಮ ವಿದ್ಯಾರ್ಥಿವೇತನ ಮಂಜೂರಾತಿ ಸಂಬಂಧ ಉಲ್ಲೇಖ (3)ರಲ್ಲಿ ಆರು ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ಸುತ್ತೋಲೆ ಹೊರಡಿಸಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಈಗಾಗಲೇ ಸೂಚನೆ ನೀಡಿದೆ. 2018-19ನೇ ಸಾಲಿಗೆ ವಿದ್ಯಾರ್ಥಿವೇತನಕ್ಕಾಗಿ ಲೆಕ್ಕ ಶೀರ್ಷಿಕೆ:2202-03-107-1-10-117 ರಡಿಯಲ್ಲಿ ಒದಗಿಸಲಾದ ಒಟ್ಟು ಅನುದಾನದ ಮೊತ್ತ ರೂ.600.00 ಲಕ್ಷಗಳಲ್ಲಿ ಪ್ರಸ್ತುತ ಉಲ್ಲೇಖ (2)ರ ಸರ್ಕಾರದ ಆದೇಶಗಳಲ್ಲಿ (1) ಮತ್ತು (2)ನೇ ಕಂತುಗಳಲ್ಲಿ ಒಟ್ಟು 300.00 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. ಉಲ್ಲೇಖ (4)ರ ಪ್ರಕಾರ ವಿವಿಧ ದಿನಾಂಕಗಳಲ್ಲಿ 06 ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಂದ ಸರ್.ಸಿ.ವಿ. ರಾಮನ್ ಮತ್ತು ಸಂಚಿಹೊನ್ನಮ್ಮ ವಿದ್ಯಾರ್ಥಿವೇತನ ಮಂಜೂರಾತಿಗಾಗಿ ಅನುದಾನ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಗಳನ್ನು ಪರಿಶೀಲಿಸಿ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನದ ಲಭ್ಯತೆಯನ್ನು ಜಂಟಿ ನಿರ್ದೇಶಕರ ಬೇಡಿಕೆ ಮೊತ್ತದ ಅನುಪಾತದ ಆಧಾರದ ಮೇಲೆ 2018-19ನೇ ಸಾಲಿಗೆ ಸರ್.ಸಿ.ವಿ. ರಾಮನ್ ಮತ್ತು ಸಂಚಿಹೊನ್ನಮ್ಮ ನವೀಕರಣ ಮತ್ತು ನೂತನ ವಿದ್ಯಾರ್ಥಿವೇತನವನ್ನು ವಿದ್ಯಾರ್ಥಿಗಳಿಗೆ ಮಂಜೂರು ಮಾಡುವ ಸಲುವಾಗಿ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ಅನುದಾನ ಬಿಡುಗಡೆ ಮಾಡಲು ಈ ಆದೇಶ.

**ಆದೇಶ ಸಂಖ್ಯೆ: ಕಾಶಿಇ/11/ಸುತ್ತೋಲೆ/ಅನುದಾನ ಬಿಡುಗಡೆ/2018-19/ವಿವೇ, ದಿನಾಂಕ :24.09.2018.**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ 2018-19ನೇ ಸಾಲಿಗೆ ಸರ್.ಸಿ.ವಿ.ರಾಮನ್ ಮತ್ತು ಸಂಚಿ ಹೊನ್ನಮ್ಮ ನವೀಕರಣ ಮತ್ತು ನೂತನ ವಿದ್ಯಾರ್ಥಿವೇತನಗಳನ್ನು ಮಂಜೂರು ಮಾಡಲು ಸರ್ಕಾರದಿಂದ 2 ಕಂತುಗಳಲ್ಲಿ ಬಿಡುಗಡೆ ಮಾಡಿರುವ ಒಟ್ಟು ರೂ.300.00 ಲಕ್ಷಗಳ ಅನುದಾನವನ್ನು ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು 06 ಪ್ರಾದೇಶಿಕ ಜಂಟಿ ನಿರ್ದೇಶಕರಿಗೆ ಬಿಡುಗಡೆ ಮಾಡಲಾಗಿದೆ. ಪ್ರಾದೇಶಿಕ ಜಂಟಿ ನಿರ್ದೇಶಕರವಾರು ಬಿಡುಗಡೆ ಮಾಡಿರುವ ಅನುದಾನವನ್ನು ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧ 1 ರಿಂದ 6ರಲ್ಲಿ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ | ಬಿಡುಗಡೆ ಮಾಡುತ್ತಿರುವ ಅನುದಾನದ ಮೊತ್ತ | ವಿದ್ಯಾರ್ಥಿಗಳ ಸಂಖ್ಯೆ | ಷರಾ |
|---|---|---|---|---|
| "ಸರ್.ಸಿ.ವಿ. ರಾಮನ್ ವಿದ್ಯಾರ್ಥಿವೇತನ" | | | | |
| 1 | 2202-03-107-1-10-117 (P) (GEN) | 1,11,50,000 | 2230 | ಪ್ರತಿ ವಿದ್ಯಾರ್ಥಿಗೆ ತಲಾ ರೂ.5000/- ಗಳಂತೆ |
| "ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನ" | | | | |
| 2 | 2202-03-107-1-10-117 (P) (GEN) | 1,88,50,000 | 9425 | ಪ್ರತಿ ವಿದ್ಯಾರ್ಥಿನಿಗೆ ತಲಾ ರೂ.2000/- ಗಳಂತೆ |
| ಒಟ್ಟು ಮೊತ್ತ | | 3,00,00,000 | 11655 | |

**(ರೂ.ಮೂರು ಕೋಟಿ ಮಾತ್ರ)**

<u>2018-19ನೇ ಸಾಲಿಗೆ ನವೀಕರಣ ವಿದ್ಯಾರ್ಥಿವೇತನ ಮಂಜೂರು ಮಾಡುವಾಗ ಅನುಸರಿಸಬೇಕಾದ ನಿಬಂಧನೆಗಳು :</u>

1. ಮೊದಲಿಗೆ ಉಲ್ಲೇಖ (1)ರ ಪ್ರಕಾರ 2016-17 ಮತ್ತು 2017-18ನೇ ಸಾಲಿಗೆ ಮಂಜೂರು ಮಾಡಲಾದ ವಿದ್ಯಾರ್ಥಿಗಳಲ್ಲಿ ಅರ್ಹ ವಿದ್ಯಾರ್ಥಿಗಳಿಗೆ (ದ್ವಿತೀಯ ಮತ್ತು ತೃತೀಯ ಪದವಿ ತರಗತಿ) ಸ್ವಯಂ ನವೀಕರಿಸಿ (Automatic Renewal) 2018-19ನೇ ಸಾಲಿಗೆ ಸರ್ ಸಿ.ವಿ ರಾಮನ್ ಮತ್ತು ಸಂಚಿಹೊನ್ನಮ್ಮ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಲು ನಿಯಮಗಳನ್ವಯ ಕ್ರಮಕೈಗೊಳ್ಳುವುದು.
2. ಆಯಾ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಗೆ ಒಳಪಡುವ ಎಲ್ಲಾ ಜಿಲ್ಲೆಗಳ ಸರ್ಕಾರಿ/ಖಾಸಗಿ ಅನುದಾನಿತ ಕಾಲೇಜುಗಳಿಂದ <u>2018-19ನೇ ಸಾಲಿಗೆ ಸ್ವೀಕೃತವಾದ ನೂತನ</u> ಅರ್ಜಿಗಳನ್ನು ಪರಿಶೀಲಿಸಿ ಜಿಲ್ಲಾವಾರು, ಗರಿಷ್ಠ ಅಂಕದಿಂದ ಕನಿಷ್ಠ ಅಂಕದಂತೆ ಮೆರಿಟ್ ಆಧಾರದ ಮೇಲೆ (In descending order) ಪಟ್ಟಿಯನ್ನು ಸಿದ್ಧಪಡಿಸಿ ವಿದ್ಯಾರ್ಥಿವೇತನ ಮಂಜೂರಾತಿಗೆ ಕ್ರಮವಹಿಸುವುದು.
3. ಜಿಲ್ಲಾವಾರು ಮೆರಿಟ್ ಆಧಾರದ ಪಟ್ಟಿಯನ್ನು ತಯಾರಿಸಿದ ನಂತರ ಬಿಡುಗಡೆ ಮಾಡಿರುವ ಅನುದಾನವನ್ನು ಎಲ್ಲಾ ಜಿಲ್ಲೆಗಳ ಕಾಲೇಜುಗಳ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ (ಅನುಪಾತದಂತೆ) ವಿದ್ಯಾರ್ಥಿವೇತನ ಮಂಜೂರು ಮಾಡುವುದು.
4. ಆಯ್ಕೆಗೊಂಡ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವ ಕಾಲೇಜುವಾರು ಪಟ್ಟಿ ತಯಾರಿಸಿ ವಿದ್ಯಾರ್ಥಿವೇತನ ಬಿಡುಗಡೆಗೆ ಕ್ರಮ ಕೈಗೊಳ್ಳುವುದು.
5. ಆಯಾ ವಿದ್ಯಾರ್ಥಿವೇತನಕ್ಕೆ ತಮಗೆ ಬಿಡುಗಡೆ ಮಾಡಿರುವ ಅನುದಾನಗಳನ್ನು ಖಜಾನೆ-2ರ ಮುಖಾಂತರ ಫಲಾನುಭವಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡುವುದು. ವಿದ್ಯಾರ್ಥಿವೇತನ ಮೊತ್ತಗಳು ಜಮಾ ಆಗಿರುವ ಬಗ್ಗೆ ಖಚಿತಪಡಿಸಿಕೊಂಡು 62ಬಿ ಪಡೆದು ಒಟ್ಟು ಮೊತ್ತಕ್ಕೆ ಬಳಕೆ ಪ್ರಮಾಣ ಪತ್ರಗಳನ್ನು ಈ ಕಛೇರಿಗೆ ಸಲ್ಲಿಸುವುದು.
6. ವಿದ್ಯಾರ್ಥಿವೇತನ ಮಂಜೂರು ಮಾಡುವ ಸಮಯದಲ್ಲಿ ಪಾರದರ್ಶಕತೆ ಕಾಪಾಡುವುದು ಹಾಗೂ ಯಾವುದೇ ದೂರಿಗೆ (ವಿದ್ಯಾರ್ಥಿ/ಪೋಷಕರಿಂದ) ಆಸ್ಪದವಿಲ್ಲದಂತೆ ವಿದ್ಯಾರ್ಥಿವೇತನ ಮಂಜೂರು ಮಾಡುವುದು.
7. ಯಾವುದೇ ಕಾರಣಕ್ಕೂ ಅನುದಾನ ವ್ಯಪಗತ (Lapse) ಆಗದಂತೆ ಮುಂಜಾಗ್ರತೆ ವಹಿಸುವುದು.

ಆಯಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ಸರ್.ಸಿ.ವಿ. ರಾಮನ್ ಮತ್ತು ಸಂಚಿಹೊನ್ನಮ್ಮ **ನವೀಕರಣ & ನೂತನ ವಿದ್ಯಾರ್ಥಿವೇತನಗಳಿಗೆ** ಬಿಡುಗಡೆ ಮಾಡಿರುವ ಅನುದಾನದ ವಿವರಗಳನ್ನು ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧಗಳಲ್ಲಿ ನೀಡಲಾಗಿದೆ. ಬಿಡುಗಡೆ ಮಾಡಿರುವ ಅನುದಾನಗಳನ್ನು ಬಳಸಿಕೊಂಡು, ವಿದ್ಯಾರ್ಥಿವೇತನವಾರು ಬಳಕೆ ಪ್ರಮಾಣ ಪತ್ರವನ್ನು ಈ ಕಛೇರಿಗೆ ಈ ಆದೇಶದೊಂದಿಗೆ ಲಗತ್ತಿಸಲಾದ ನಮೂನೆಯಲ್ಲಿ ರವಾನಿಸಲು ಸೂಚಿಸಿದೆ. ಮೇಲ್ಕಂಡ ಲೆಕ್ಕಶೀರ್ಷಿಕೆಯಡಿಯಲ್ಲಿ ಬಿಡುಗಡೆಯಾಗಿರುವ ಅನುದಾನವನ್ನು ಯಾವುದೇ ಕಾರಣಕ್ಕೂ ಅಧ್ಯರ್ಪಿಸದೆ (should not surrender) ಹಾಗೂ ಮೇಲ್ಕಂಡ ಯಾವುದೇ ಅನುದಾನ ವ್ಯಪಗತ (Lapse)ವಾಗದಂತೆ ಅಗತ್ಯ ಕ್ರಮ ವಹಿಸಲು ಮತ್ತೊಮ್ಮೆ ಸೂಚಿಸಿದೆ.

**(ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

24/9/18

**ಕಾಲೇಜು ಶಿಕ್ಷಣ ನಿರ್ದೇಶಕರು**

<u>ಇವರಿಗೆ :</u>

1. ಜಂಟಿ ನಿರ್ದೇಶಕರುಗಳು, ಪ್ರಾದೇಶಿಕ ಕಛೇರಿ ಬೆಂಗಳೂರು/ಮೈಸೂರು/ಮಂಗಳೂರು/ಶಿವಮೊಗ್ಗ/ಧಾರವಾಡ/ಕಲಬುರಗಿ.
2. ಮ್ಯಾನೇಜರ್, ಹಣ ಮತ್ತು ಪಾವತಿ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಇವರಿಗೆ ಸದರಿ ಅನುದಾನಗಳನ್ನು ಮೇಲ್ಕಂಡ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ಅನುಬಂಧದಲ್ಲಿರುವಂತೆ ಖಜಾನೆ-2ರ ಮುಖಾಂತರ C Mode ನಲ್ಲಿ ಬಿಡುಗಡೆ ಮಾಡಲು ಅಗತ್ಯಕ್ರಮಕೈಗೊಳ್ಳುವಂತೆ ಸೂಚಿಸಿದೆ.

<u>ಪ್ರತಿಯನ್ನು ಶೀಘ್ರ ಕ್ರಮಕ್ಕಾಗಿ ಕಳುಹಿಸಿದೆ.</u>

1. ಲೆಕ್ಕಾಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು ಹಾಗೂ ಎಲ್ಲಾ ಪ್ರಾದೇಶಿಕ ಕಛೇರಿಗಳು – ಮಾಹಿತಿಗಾಗಿ.
2. ಉಪನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು- ಇವರಿಗೆ ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ
3. ಮ್ಯಾನೇಜರ್/ಅಧೀಕ್ಷಕರು, ಯೋಜನಾ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು.
4. ಮಾಹಿತಿ ಅಧಿಕಾರಿಗಳು, ಮಾಹಿತಿ & ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಸದರಿ ಆದೇಶವನ್ನು ಇಲಾಖಾ ವೆಬ್-ಸೈಟ್‌ನಲ್ಲಿ ಅಳವಡಿಸಲು ತಿಳಸಲಾಗಿದೆ. 5. ಕಛೇರಿ ಪ್ರತಿ.

ಆದೇಶ ಸಂಖ್ಯೆ: ಕಾಶಿಇ/11/ಸುತ್ತೋಲೆ/ಅನುದಾನ ಬಿಡುಗಡೆ/2018-19/ವಿವೇ, ದಿನಾಂಕ :24.09.2018.ಕ್ಕೆ ಸಂಬಂಧಿಸಿದಂತೆ

## ಅನುಬಂಧ – 1

### ಪ್ರಾದೇಶಿಕ ಜಂಟಿ ನಿರ್ದೇಶಕರು, ಬೆಂಗಳೂರು

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ | ಬಿಡುಗಡೆ ಮಾಡುತ್ತಿರುವ ಅನುದಾನ ಮೊತ್ತ | ವಿದ್ಯಾರ್ಥಿಗಳ ಸಂಖ್ಯೆ | ಷರಾ |
|---|---|---|---|---|
| ಸರ್.ಸಿ.ವಿ. ರಾಮನ್ ವಿದ್ಯಾರ್ಥಿವೇತನ 2018-19 | | | | |
| 1 | 2202-03-107-1-10-117 (P) (GEN) | 4.50 | 90 | ತಲಾ ರೂ.5,000/- |
| | | | | |
| ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನ 2018-19 | | | | |
| 2 | 2202-03-107-1-10-117 (P) (GEN) | 30.00 | 1500 | ತಲಾ ರೂ.2,000/- |
| ಒಟ್ಟು ಮೊತ್ತ | | 34.50 | 1590 | |

(ಒಟ್ಟು ರೂ.ಮೂವತ್ತ ನಾಲ್ಕು ಲಕ್ಷದ ಐವತ್ತು ಸಾವಿರಗಳು ಮಾತ್ರ)

27/9/

ಕಾಲೇಜು ಶಿಕ್ಷಣ ನಿರ್ದೇಶಕರು

ಆದೇಶ ಸಂಖ್ಯೆ: ಕಾಶಿಇ/11/ಸುತ್ತೋಲೆ/ಅನುದಾನ ಬಿಡುಗಡೆ/2018-19/ವಿವೇ, ದಿನಾಂಕ :24.09.2018.ಕ್ಕೆ ಸಂಬಂಧಿಸಿದಂತೆ

## ಅನುಬಂಧ - 2

### ಪ್ರಾದೇಶಿಕ ಜಂಟಿ ನಿರ್ದೇಶಕರು, ಮೈಸೂರು

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ | ಬಿಡುಗಡೆ ಮಾಡುತ್ತಿರುವ ಅನುದಾನ ಮೊತ್ತ | ವಿದ್ಯಾರ್ಥಿಗಳ ಸಂಖ್ಯೆ | ಷರಾ |
|---|---|---|---|---|
| ಸರ್.ಸಿ.ವಿ. ರಾಮನ್ ವಿದ್ಯಾರ್ಥಿವೇತನ 2018-19 | | | | |
| 1 | 2202-03-107-1-10-117 (P) (GEN) | 14.50 | 290 | ತಲಾ ರೂ.5,000/- |
| | | | | |
| ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನ 2018-19 | | | | |
| 2 | 2202-03-107-1-10-117 (P) (GEN) | 25.50 | 1275 | ತಲಾ ರೂ.2,000/- |
| ಒಟ್ಟು ಮೊತ್ತ | | 40.00 | 1565 | |

(ರೂ. ನಲವತ್ತು ಲಕ್ಷಗಳು ಮಾತ್ರ)

24/9

ಕಾಲೇಜು ಶಿಕ್ಷಣ ನಿರ್ದೇಶಕರು

ಆದೇಶ ಸಂಖ್ಯೆ: ಕಾಶಿಇ/11/ಸುತ್ತೋಲೆ/ಅನುದಾನ ಬಿಡುಗಡೆ/2018-19/ವಿವೇ, ದಿನಾಂಕ :24.09.2018.ಕ್ಕೆ ಸಂಬಂಧಿಸಿದಂತೆ

## ಅನುಬಂಧ - 3

### ಪ್ರಾದೇಶಿಕ ಜಂಟಿ ನಿರ್ದೇಶಕರು, ಮಂಗಳೂರು

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ | ಬಿಡುಗಡೆ ಮಾಡುತ್ತಿರುವ ಅನುದಾನ ಮೊತ್ತ | ವಿದ್ಯಾರ್ಥಿಗಳ ಸಂಖ್ಯೆ | ಷರಾ |
|---|---|---|---|---|
| ಸರ್.ಸಿ.ವಿ. ರಾಮನ್ ವಿದ್ಯಾರ್ಥಿವೇತನ 2018-19 | | | | |
| 1 | 2202-03-107-1-10-117 (P) (GEN) | 12.50 | 250 | ತಲಾ ರೂ.5,000/- |
| | | | | |
| ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನ 2018-19 | | | | |
| 2 | 2202-03-107-1-10-117 (P) (GEN) | 35.00 | 1750 | ತಲಾ ರೂ.2,000/- |
| ಒಟ್ಟು | | 47.50 | 2000 | |

(ಒಟ್ಟು ರೂ.ನಲವತ್ತೇಳು ಲಕ್ಷದ ಐವತ್ತು ಸಾವಿರಗಳು ಮಾತ್ರ)

24/9/18
ಕಾಲೇಜು ಶಿಕ್ಷಣ ನಿರ್ದೇಶಕರು

ಆದೇಶ ಸಂಖ್ಯೆ: ಕಾಶಿಇ/11/ಸುತ್ತೋಲೆ/ಅನುದಾನ ಬಿಡುಗಡೆ/2018-19/ವಿವೇ, ದಿನಾಂಕ :24.09.2018.ಕ್ಕೆ ಸಂಬಂಧಿಸಿದಂತೆ

## ಅನುಬಂಧ - 4

### ಪ್ರಾದೇಶಿಕ ಜಂಟಿ ನಿರ್ದೇಶಕರು, ಶಿವಮೊಗ್ಗ

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ | ಬಿಡುಗಡೆ ಮಾಡುತ್ತಿರುವ ಅನುದಾನ ಮೊತ್ತ | ವಿದ್ಯಾರ್ಥಿಗಳ ಸಂಖ್ಯೆ | ಷರಾ |
|---|---|---|---|---|
| ಸರ್.ಸಿ.ವಿ. ರಾಮನ್ ವಿದ್ಯಾರ್ಥಿವೇತನ 2018-19 | | | | |
| 1 | 2202-03-107-1-10-117 (P) (GEN) | 28.00 | 560 | ತಲಾ ರೂ.5,000/- |
| | | | | |
| ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನ 2018-19 | | | | |
| 2 | 2202-03-107-1-10-117 (P) (GEN) | 37.00 | 1850 | ತಲಾ ರೂ.2,000/- |
| | ಒಟ್ಟು ಮೊತ್ತ | 65.00 | 2410 | |

(ರೂ. ಅರವತ್ತೈದು ಲಕ್ಷಗಳು ಮಾತ್ರ)

ಕಾಲೇಜು ಶಿಕ್ಷಣ ನಿರ್ದೇಶಕರು

D:\2017-18 Files\file 60- JD Budjet\2018-19\Ist & IInd inst 24.09.2018.docx

ಆದೇಶ ಸಂಖ್ಯೆ: ಕಾಶಿಇ/11/ಸುತ್ತೋಲೆ/ಅನುದಾನ ಬಿಡುಗಡೆ/2018-19/ವಿವೇ, ದಿನಾಂಕ :24.09.2018.ಕ್ಕೆ ಸಂಬಂಧಿಸಿದಂತೆ

## ಅನುಬಂಧ - 5

### ಪ್ರಾದೇಶಿಕ ಜಂಟಿ ನಿರ್ದೇಶಕರು, ಧಾರವಾಡ

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ | ಬಿಡುಗಡೆ ಮಾಡುತ್ತಿರುವ ಅನುದಾನ ಮೊತ್ತ | ವಿದ್ಯಾರ್ಥಿಗಳ ಸಂಖ್ಯೆ | ಷರಾ |
|---|---|---|---|---|
| ಸರ್.ಸಿ.ವಿ. ರಾಮನ್ ವಿದ್ಯಾರ್ಥಿವೇತನ 2018-19 | | | | |
| 1 | 2202-03-107-1-10-117 (P) (GEN) | 6.00 | 120 | ತಲಾ ರೂ.5,000/- |
| | | | | |
| ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನ 2018-19 | | | | |
| 2 | 2202-03-107-1-10-117 (P) (GEN) | 29.00 | 1450 | ತಲಾ ರೂ.2,000/- |
| ಒಟ್ಟು ಮೊತ್ತ | | 35.00 | 1570 | |

(ರೂ. ಮೂವತ್ತೈದು ಲಕ್ಷಗಳು ಮಾತ್ರ)

24/9/18

ಕಾಲೇಜು ಶಿಕ್ಷಣ ನಿರ್ದೇಶಕರು

ಆದೇಶ ಸಂಖ್ಯೆ: ಕಾಶಿಇ/11/ಸುತ್ತೋಲೆ/ಅನುದಾನ ಬಿಡುಗಡೆ/2018-19/ವಿವೇ, ದಿನಾಂಕ :24.09.2018.ಕ್ಕೆ ಸಂಬಂಧಿಸಿದಂತೆ

## ಅನುಬಂಧ - 6

### ಪ್ರಾದೇಶಿಕ ಜಂಟಿ ನಿರ್ದೇಶಕರು, ಕಲ್ಬುರ್ಗಿ

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ | ಬಿಡುಗಡೆ ಮಾಡುತ್ತಿರುವ ಅನುದಾನ ಮೊತ್ತ | ವಿದ್ಯಾರ್ಥಿಗಳ ಸಂಖ್ಯೆ | ಷರಾ |
|---|---|---|---|---|
| ಸರ್.ಸಿ.ವಿ. ರಾಮನ್ ವಿದ್ಯಾರ್ಥಿವೇತನ 2018-19 | | | | |
| 1 | 2202-03-107-1-10-117 (P) (GEN) | 46.00 | 920 | ತಲಾ ರೂ.5,000/- |
| | | | | |
| ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನ 2018-19 | | | | |
| 2 | 2202-03-107-1-10-117 (P) (GEN) | 32.00 | 1600 | ತಲಾ ರೂ.2,000/- |
| | ಒಟ್ಟು ಮೊತ್ತ | 78.00 | 2520 | |

(ರೂ. ಎಪ್ಪತ್ತೆಂಟು ಲಕ್ಷಗಳು ಮಾತ್ರ)

ಕಾಲೇಜು ಶಿಕ್ಷಣ ನಿರ್ದೇಶಕರು